# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | | 323 |
| ಮಾನ್ಯ ಸದಸ್ಯರ ಹೆಸರು | | ಶ್ರೀ ರಿಜ್ವಾನ್ ಅರ್ಷದ್ |
| ಉತ್ತರಿಸುವ ಸಚಿವರು | | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | | 12-07-2018 |
| ಪ್ರಶ್ನೆ | | ಉತ್ತರ |
| (ಅ) | ಕರ್ನಾಟಕದಲ್ಲಿರುವ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ, ತರಗತಿ ಪ್ರಾರಂಭ ಪರೀಕ್ಷೆಗಳ ವೇಳಾಪಟ್ಟಿ ಮತ್ತು ಫಲಿತಾಂಶ ಒಂದೇ ಸಮಯದಲ್ಲಿ ನಡೆಯುವ ಬಗ್ಗೆ ಕಳೆದ ವರ್ಷ ಆದೇಶವಾಗಿದ್ದು, ಅದರಂತೆ ಎಲ್ಲಾ ವಿಶ್ವವಿದ್ಯಾನಿಲಯಗಳು ಪಾಲಿಸುತ್ತಿವೆಯೇ; (ವಿವರ ನೀಡುವುದು) | ಪಾಲಿಸಲಾಗುತ್ತಿದೆ.<br>ಸರ್ಕಾರದ ಆದೇಶ ಸಂ. ಇಡಿ 292 ಯುಎನ್ಇ 2016, ದಿನಾಂಕ: 28-07-2016ರಲ್ಲಿ ರಾಜ್ಯದಲ್ಲಿರುವ ಎಲ್ಲಾ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳು ಏಕರೂಪ ವೇಳಾಪಟ್ಟಿಯನ್ನು 2016-17ನೇ ಶೈಕ್ಷಣಕ ವರ್ಷ ಹಾಗೂ ತದನಂತರದ ಶೈಕ್ಷಣಿಕ ವರ್ಷಗಳಲ್ಲಿಯೂ ಅಳವಡಿಸಿಕೊಂಡು ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಯಾವುದೇ ಹಿನ್ನಡೆಯಾಗದಂತೆ ಕ್ರಮವಹಿಸಲು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.<br>ಮುಂದುವರೆದು, ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಪ್ರತಿ ವರ್ಷವು ಕಡ್ಡಾಯವಾಗಿ ಸ್ನಾತಕ ಪದವಿಗಳ **ಫಲಿತಾಂಶವನ್ನು ಮೇ 31ರೊಳಗಾಗಿ ಹಾಗೂ ಸ್ನಾತಕೋತ್ತರ ಪದವಿಗಳ ಫಲಿತಾಂಶವನ್ನು ಜೂನ್ 30ರ ಒಳಗಾಗಿ ಪ್ರಕಟಿಸಬೇಕೆಂದು ಹಾಗೂ ಈ ಸೂಚನೆಯನ್ನು ಪಾಲಿಸದೇ ಇದ್ದಲ್ಲಿ, ಆಯಾ ವಿಶ್ವವಿದ್ಯಾಲಯದ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಲಾಗುವುದೆಂದು ಆದೇಶಿಸಿದೆ.** |
| (ಆ) | ಪಾಲಿಸದಿದ್ದಲ್ಲಿ, ಯಾವ ಕ್ರಮವನ್ನು ತೆಗೆದುಕೊಳ್ಳಲಾಗಿದೆ; (ವಿವರ ನೀಡುವುದು) | |
| ಇ) | ಒಂದಿಲ್ಲೊಂದು ವಿಶ್ವವಿದ್ಯಾಲಯಗಳ ಪ್ರತಿ ಸೆಮಿಸ್ಟರ್‌ಗಳ ಪ್ರಶ್ನೆಪತ್ರಿಕೆಗಳು ಪರೀಕ್ಷೆಗೂ ಮುನ್ನವೆ ಬಹಿರಂಗಗೊಳ್ಳುತ್ತಿರುವುದು ವರದಿಯಾಗುತ್ತಿದ್ದು, ಇದನ್ನು ತಡೆಗಟ್ಟಲು ಯಾವ ಸುಧಾರಿತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ? (ವಿವರ ನೀಡುವುದು) | • ಪ್ರಶ್ನೆ ಪತ್ರಿಕೆಗಳನ್ನು ಸುರಕ್ಷತೆಯ ಮಾನದಂಡ ಅನುಸರಿಸುತ್ತಿರುವ ವಿಶ್ವಾಸಾರ್ಹ ಮುದ್ರಣ ಸಂಸ್ಥೆಗಳನ್ನು ಗುರುತಿಸಿ (ರಾಜ್ಯದೊಳಗಿನ ಮತ್ತು ಹೊರ ರಾಜ್ಯದ ಮುದ್ರಣ ಸಂಸ್ಥೆಗಳು) ಮುದ್ರಿಸಲಾಗುತ್ತಿದೆ.<br>• ಪ್ರಶ್ನೆ ಪತ್ರಿಕೆಗಳನ್ನು ವಿಶ್ವವಿದ್ಯಾಲಯದ ನಿಗದಿತ ಕೊಠಡಿಯಲ್ಲಿ ಸಿಸಿ ಟಿವಿ ಕಣ್ಗಾವಲಿನಲ್ಲಿ ಸಿದ್ಧಪಡಿಸಲಾಗುತ್ತದೆ.<br>• ಪ್ರಶ್ನೆ ಪತ್ರಿಕೆಗಳನ್ನು ಪರೀಕ್ಷೆಗಳು ಆರಂಭವಾಗುವ ಒಂದು ದಿನ ಮುಂಚಿತವಾಗಿ ಮಾತ್ರ ಪರೀಕ್ಷಾ ವಿಭಾಗದ ನಿಯೋಜಿತ ಸಿಬ್ಬಂದಿಗಳಿಂದಲೇ ಕಾಲೇಜುಗಳಿಗೆ ವಿತರಿಸಲಾಗುತ್ತದೆ.<br>• ಪರೀಕ್ಷಾ ಕೇಂದ್ರಗಳಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಸುರಕ್ಷಿತವಾಗಿ ಭದ್ರತಾ ಕೊಠಡಿಯಲ್ಲಿಟ್ಟು ಸಿಸಿ ಟಿವಿಗಳನ್ನು ಅಳವಡಿಸಲು ಸೂಚಿಸಲಾಗಿದೆ<br>• ಜಾಗೃತಾ ದಳದ ಸದಸ್ಯರಿಂದ ಪ್ರತಿದಿನ ಪ್ರಶ್ನೆ ಪತ್ರಿಕೆಗಳನ್ನು ಪರಿವೀಕ್ಷಿಸಿ ವರದಿಯನ್ನು ಪಡೆದು ನಿರಂತರವಾಗಿ ನಿಗಾ ವಹಿಸಲು ತಿಳಿಸಲಾಗಿದೆ. |

ಸಂಖ್ಯೆ: ಇಡಿ 244 ಯುಎನ್ಇ 2018

(ಜಿ.ಟಿ. ದೇವೇಗೌಡ)

ಉನ್ನತ ಶಿಕ್ಷಣ ಸಚಿವರು.